


### ಉತ್ತಮ ಮಾರ್ಗಸೂಚಿ

'ಚಿರಯೌವನ; ದಾರಿ ಯಾವುದು?', ನಡಹಳ್ಳಿ ವಸಂತ್ ಅವರ ಮುಖಪುಟ ಲೇಖನ (ಸುಧಾ, ಮೇ 25)ಹಿರಿಯರಿಗೆ ಉತ್ತಮ ಮಾರ್ಗಸೂಚಿಯಾಗಿದೆ. ಮೈಮುಪ್ಪಾದರೆ ಮನ ಮುಪ್ಪೇನು? ಎಂದು ಉತ್ಸಾಹದಿಂದ ನಮ್ಮ ಹಿರಿಯರು ಪ್ರಶ್ನಿಸುವಂತಾಗಬೇಕು.

—ಸು.ವಿಜಯಲಕ್ಷ್ಮಿ ಶಿವಮೊಗ್ಗ, ಬೆಳ್ಳಾವೆ ರಮೇಶ್ ಬೆಂಗಳೂರು, ಕೆ.ಎಂ. ಮಧ್ವರಾಯ ಬೆಂಗಳೂರು, ಗಾಣಧಾಳು ರಾಮಣ್ಣ ಚಿತ್ರದುರ್ಗ, ಕೆ.ಪಿ. ರಾಮಗುಂಡಿ ಬೈಲಹೊಂಗಲ, ನೀಲಮ್ಮ ಕುಮಾರಪ್ಪ ಲಿಂಗಸಗೂರ, ಬಿ.ಎಂ.ಶಿವಲಿಂಗೇಗೌಡ ಬೇವಿನಹಳ್ಳಿ, ಪಿ.ಗೋವಿಂದರಾಜ್ ಶಿವಮೊಗ್ಗ, ಎಂ.ಎಸ್. ಧರ್ಮೇಂದ್ರ ದೊಡ್ಡಮಗ್ಗೆ, ಮಹಾವೀರ ಕಾಸರ ಶಿವಮೊಗ್ಗ, ಮುಕುಂದ ಹೆರಕಲ್ಲ ಕಲಬುರಗಿ, ಶ್ರೀನಾಥ್ ಕೊನೇಟಿ ಬೆಂಗಳೂರು, ಮುರಳೀಧರ ಎಚ್.ಪಿ. ತುಮಕೂರು, ಡಾ.ಲೀಲಾವತಿ ದೇವದಾಸ್ ಬೆಂಗಳೂರು

### ಉತ್ಕೃಷ್ಟ ಬರಹ

'ಬ್ರಹ್ಮವಿಹಾರ' ವಿಚಾರ ಲಹರಿ (ಮೂಚಿ) ಉತ್ಕೃಷ್ಟ ಬರಹ. ಇದು ಇಂಗ್ಲಿಷ್ ಹಿಂದಿಗೆ ಅನುವಾದಗೊಂಡರೆ ಸಂದೇಶಕ್ಕೆ ವಿಶ್ವ ವ್ಯಾಪ್ತಿ ಬರುವುದು. ನಾನಂತೂ ಈ ಗದ್ಯ ಶೈಲಿಯನ್ನು ಕಾದಿರಿಸಿ ಆತ್ಮೀಯರಿಗೆ ಹಂಚುತ್ತೇನೆ.

—ಎಸ್.ಜಿ.ಬಿದರಕುಂದಿ

### ವೈದ್ಯರ ವೃತ್ತಿ ದಂಧೆ

'ನಿಮ್ಮೊಡನೆ'ಯಲ್ಲಿ 'ವೈದ್ಯರ ಮೇಲೆ ಅಪನಂಬಿಕೆ ಸರಿಯೆ?' (ಬಿ.ಎಂ. ಹನೀಫ್) ಬರಹ ವೈದ್ಯರು ಓದಿ ಆತ್ಮಾವಲೋಕನ ಮಾಡಿಕೊಳ್ಳಲು ಸೂಕ್ತವಾಗಿದೆ. ಬಹುತೇಕ ವೈದ್ಯರು ವೃತ್ತಿಯನ್ನು ದಂಧೆಯನ್ನಾಗಿಸಿ ಕೊಂಡಿರುವುದು ಸತ್ಯ ಸಂಗತಿ. ವೈದ್ಯರ ಮನೋಭಾವನೆ ಬದಲಾಗದ ಹೊರತು ರೋಗಿ ವೈದ್ಯರ ನಡುವಿನ ಅಂತರ, ಸಂಘರ್ಷದ ವಾತಾವರಣ ನಿಲ್ಲದು. ರೋಗಿಯಲ್ಲಿ ಆತ್ಮಸ್ಥೈರ್ಯ ತುಂಬುವ ಕೆಲಸ ವೈದ್ಯರದ್ದು.

—ಬಂಟ್ವಾಳ ಸೂರ್ಯನಾರಾಯಣರಾವ್ ಮಂಡ್ಯ, ಲಲಿತಾ ಅಂಬಾಗಿಲು ಉಪ್ಪುಂದ, ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ, ರಾಜಶೇಖರ ಹಾದಿಮನಿ ಧಾರವಾಡ, ಮಧುರಾ ಸುಬ್ರಹ್ಮಣ್ಯ ಬೆಂಗಳೂರು

### ಕಥೆ ಚೆನ್ನಾಗಿದೆ

ಕಥೆ 'ಬೊಳ್ಳೆಸೊಪ್ಪು' (ಡಾ. ನಾ.ಮೊಗಸಾಲೆ) ಚೆನ್ನಾಗಿದೆ.

—ಕೊಹಿಮ ಬಸರಕೋಡು

### ರೈತರಿಗೆ ಉಪಕಾರಿ

'ಕಾರವಾರದ ಕಡಲ ಕಾಗೆ' (ಪುಟ್ಟರಾಜು ಕೈಗಾ) ಲೇಖನ ಚೆನ್ನಾಗಿದೆ. ಈ ಕಡಲ ಕಾಗೆಗಳು ನೋಡಲು ತುಂಬ ಸುಂದರವಾಗಿವೆ. ರೈತರ ಗದ್ದೆಗಳಲ್ಲಿ ಬೆಳೆಯನ್ನು ಹಾಳು ಮಾಡುವ ಮಿಡತೆಯನ್ನು ತಿನ್ನುವುದರಿಂದ ಇವು ರೈತರಿಗೆ ಉಪಕಾರಿಯಾಗಿದೆ.

—ಬಿ.ಎಂ. ಶಿವಲಿಂಗೇಗೌಡ ಬೇವಿನಹಳ್ಳಿ

### ಕಮಲ ದೇಗುಲ

ಪ್ರವಾಸ ಲೇಖನ 'ಕಮಲ ದೇಗುಲ' (ಸೀತಾ ಎಸ್. ನಾರಾಯಣ) ಬಹಳ ಚೆನ್ನಾಗಿದೆ. ಲೋಟಸ್ ಟೆಂಪಲ್ ಧರ್ಮ ಶ್ರದ್ಧಾಕೇಂದ್ರದ ಬಗ್ಗೆ ವಿವರವಾದ ಮಾಹಿತಿ ಇದೆ. ಚಿತ್ರಗಳೂ ಸುಂದರವಾಗಿವೆ.

—ಟಿ.ಆರ್. ಲಲಿತರಾವ್ ಬೆಂಗಳೂರು, ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು, ರವೀಂದ್ರನಾಥ ಶಿ. ಯಡಹಳ್ಳಿ

### ಉಪಯುಕ್ತ ಮಾಹಿತಿ

'ದಿನಾ ಬ್ರಷ್ ಮಾಡ್ತಿದ್ದೀರಾ?' (ಡಾ.ಕೆ.ಎಸ್. ಚೈತ್ರಾ) ಆರೋಗ್ಯ ಲೇಖನ ಉಪಯುಕ್ತ ಮಾಹಿತಿಗಳಿಂದ ಕೂಡಿದೆ. ನಾನೂ 3–4 ತಿಂಗಳಿಗೇ ಬ್ರಷ್ ಬದಲಿಸಲು ನಿರ್ಧರಿಸಿದ್ದೇನೆ.

—ನಾರಾಯಣಯಾಜಿ ಶಿರಾಲಿ

### ಕಣ್ಣು ತೆರೆಸುವಂತಿದೆ

'ಆಟಿಕೆಗಳತ್ತ ಇರಲಿ ಚಿತ್ತ' (ಆರ್.ಬಿ. ಗುರುಬಸವರಾಜ) ಲೇಖನ ಪಾಲಕರ ಕಣ್ಣು ತೆರೆಸುವಂತಿದೆ.

—ಸುಂದರ್ ಬೆಂಗಳೂರು

### ಅಚ್ಚರಿ

ವಂಡರ್‌ಪುಟದಲ್ಲಿ 'ಪಾತಾಳದಲ್ಲಿ ಮೆಟ್ರೊ ಸ್ಟೇಷನ್', (ವಿದ್ಯಾ ಹಾಲಭಾವಿ) ಬರಹ ಓದಿ ಅಚ್ಚರಿಯಾಯಿತು.

—ಬಿ.ಎಸ್.ರಮೇಶ್ ಬೆಂಗಳೂರು

### ಜನ್ನಾ ಸನದಿ ಪ್ರಶಸ್ತಿಗೆ ಆಹ್ವಾನ

ಬೆಳಗಾವಿಯ ಬಿ.ಎ.ಸನದಿ ಸಾಂಸ್ಕೃತಿಕ ಪ್ರತಿಷ್ಠಾನ ಪ್ರತಿವರ್ಷ ನೀಡುವ ರಾಜ್ಯಮಟ್ಟದ ಜನ್ನಾ ಸನದಿ ಸಾಹಿತ್ಯ ಪ್ರಶಸ್ತಿಗೆ 2016ರಲ್ಲಿ ಪ್ರಥಮ ಆವೃತ್ತಿಯಾಗಿ ಪ್ರಕಟವಾದ ಮಕ್ಕಳ ಕಥಾ ಸಂಕಲನವನ್ನು ಆಹ್ವಾನಿಸಲಾಗಿದೆ. ಆಸಕ್ತರು ವಯಸ್ಸಿನ ದಾಖಲೆ, ವಿಳಾಸ ದೂರವಾಣಿ ಸಂಖ್ಯೆ ಇತ್ಯಾದಿಗಳೊಂದಿಗೆ– ಮೋಹನ ಕಳಸದ, ಶ್ರಮಶ್ರೀ, 25, ಶಿಕ್ಷಕರ ಬಡಾವಣೆ, ಖಾಸಬಾಗ, ಬೆಳಗಾವಿ. 590001 ವಿಳಾಸಕ್ಕೆ ಪ್ರತಿಗಳನ್ನು ಕಳುಹಿಸಿಕೊಡಬೇಕು. ಮಾಹಿತಿಗೆ: 9845921947

